# ನಿಮ್ಮೊಡನೆ

## ಎಳೆವಯಸ್ಸಿನ ತಾಯ್ತನದ ಆತಂಕ

**ಅಭಿವೃದ್ಧಿಶೀಲ ದೇಶಗಳಲ್ಲಿ 18 ವರ್ಷ ವಯಸ್ಸಾಗುವುದಕ್ಕಿಂತ ಮುಂಚೆಯೇ ಶೇಕಡ 19ರಷ್ಟು ಹೆಣ್ಣುಮಕ್ಕಳು ಗರ್ಭಿಣಿಯರಾಗುತ್ತಾರೆ. ಹೀಗೆ ಪ್ರತಿವರ್ಷ ಗರ್ಭಿಣಿಯಾಗುವ ಹೆಣ್ಣುಮಕ್ಕಳಲ್ಲಿ 20 ಲಕ್ಷ ಮಂದಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನವರು!**

ದಕ್ಷಿಣ ಏಷ್ಯಾದ ದೇಶಗಳಲ್ಲಿ ಚಿಕ್ಕ ವಯಸ್ಸಿನ ತಾಯ್ತನ ಬಹುದೊಡ್ಡ ಸಾಮಾಜಿಕ ಸಮಸ್ಯೆಯಾಗಿ ಬೆಳೆಯುತ್ತಿದೆ. ದಕ್ಷಿಣ ಏಷ್ಯಾದ ದೇಶಗಳಲ್ಲಿ 18 ವರ್ಷ ವಯಸ್ಸಿಗಿಂತ ಮುಂಚೆ ತಾಯಿಯಾಗುವ ಹೆಣ್ಣುಮಕ್ಕಳ ಸಂಖ್ಯೆ ಪ್ರತಿವರ್ಷ 2.4 ಕೋಟಿ ಎಂದು ಅಂದಾಜಿಸಲಾಗಿದೆ. ಈ ಹೆಣ್ಣುಮಕ್ಕಳು ತಮ್ಮ ವಯೋಸಹಜ ಮುಗ್ಧತೆಯನ್ನು ಪೂರ್ತಿ ಕಳೆದುಕೊಳ್ಳುವ ಮುನ್ನವೇ ಪುಟ್ಟ ಮಗುವನ್ನು ಹೊತ್ತು ಹೆತ್ತು ಬೆಳೆಸಬೇಕು. 'ಇಷ್ಟು ಚಿಕ್ಕ ವಯಸ್ಸಿನಲ್ಲಿ ಮದುವೆ ಮತ್ತು ಮಗು ಬೇಡ' ಎನ್ನುವ ಆಯ್ಕೆ ಸ್ವಾತಂತ್ರ್ಯವೂ ಇವರಿಗಿಲ್ಲ. ತಾಯ್ತನ ಇವರ ಅನಿವಾರ್ಯ ಆಯ್ಕೆಯೂ ಅಲ್ಲ. ಅದೇನಿದ್ದರೂ ಕುಟುಂಬದ ಗಂಡಸರ ಮತ್ತು ಹಿರಿಯ ಮಹಿಳೆಯರ ತೀರ್ಮಾನ! 18ಕ್ಕಿಂತ ಕಡಿಮೆ ವಯಸ್ಸಿನಲ್ಲಿ ಗರ್ಭಧಾರಣೆ ನಡೆಸಿದರೆ ಉಂಟಾಗುವ ದೈಹಿಕ ಮತ್ತು ಮಾನಸಿಕ ಏಬುಗಳ ಬಗ್ಗೆಯೂ ಇವರಿಗೆ ಅರಿವಿಲ್ಲ. ಯೋಜನೆಯೇ ಇಲ್ಲದ ಗರ್ಭತ್ವ ಉಂಟು ಮಾಡುವ ಕೌಟುಂಬಿಕ ಏರುಪೇರುಗಳಾಗಲೀ, ಅದರಿಂದ ಹೆಣ್ಣಿನ ಮೇಲೆ ನಡೆಯುವ ಲೈಂಗಿಕ ಹಿಂಸೆ ಮತ್ತು ದೀರ್ಘಕಾಲೀನ ದೈಹಿಕ ತೊಂದರೆಗಳಾಗಲೀ ಅಂತಿಮವಾಗಿ ಬಲಿ ತೆಗೆದುಕೊಳ್ಳುವುದು ಹೆಣ್ಣನ್ನೇ. 'ಅಭಿವೃದ್ಧಿಶೀಲ ದೇಶಗಳಲ್ಲಿ 18 ವರ್ಷ ವಯಸ್ಸಾಗುವುದಕ್ಕಿಂತ ಮುಂಚೆಯೇ ಶೇಕಡ 19ರಷ್ಟು ಹೆಣ್ಣುಮಕ್ಕಳು ಗರ್ಭಿಣಿಯರಾಗುತ್ತಾರೆ. ಹೀಗೆ ಪ್ರತಿವರ್ಷ ಗರ್ಭಿಣಿಯಾಗುವ ಹೆಣ್ಣುಮಕ್ಕಳಲ್ಲಿ 20 ಲಕ್ಷ ಮಂದಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನವರು' ಎಂದು ವಿಶ್ವಸಂಸ್ಥೆಯು ಆತಂಕಭರಿತ ವರದಿಯೊಂದನ್ನು ನೀಡಿದೆ.

'ಭಾರತದಲ್ಲಿ ಶೇಕಡ 47ರಷ್ಟು ಹೆಣ್ಣುಮಕ್ಕಳು 18 ವರ್ಷಕ್ಕಿಂತ ಮುಂಚೆಯೇ ಮದುವೆ ಆಗುತ್ತಾರೆ; ಅವರಲ್ಲಿ ಶೇಕಡ 20ರಷ್ಟು ಮಂದಿ 18ಕ್ಕೆ ಮುನ್ನವೇ ಮಗುವಿಗೆ ಜನ್ಮ ನೀಡುತ್ತಾರೆ. ಬಾಲ್ಯವಿವಾಹ ಪ್ರಕರಣಗಳಿಗೆ ಸಂಬಂಧಿಸಿ 2010ರಲ್ಲಿ ಕೇವಲ 11 ಮಂದಿಗೆ ಮಾತ್ರ ಶಿಕ್ಷೆ ಆಗಿದೆ' ಎನ್ನುವ ವಿಶ್ವಸಂಸ್ಥೆಯ ವರದಿಯನ್ನು ನಾವು ಗಂಭೀರವಾಗಿ ಪರಿಗಣಿಸಬೇಕಿದೆ. ಕಾನೂನು ಕೇವಲ ಕಾಗದದ ಮೇಲಿದ್ದರೆ ಪ್ರಯೋಜನವಿಲ್ಲ. ಎಳೆಯ ವಯಸ್ಸಿನ ಮದುವೆಯಿಂದ ಈ ಹೆಣ್ಣುಮಕ್ಕಳಲ್ಲಿ ಗರ್ಭತ್ವದ ಅವಧಿಯ ಹೈಪರ್‌ಟೆನ್ಷನ್, ರಕ್ತಹೀನತೆ ಮತ್ತು ಅವಧಿಪೂರ್ವ ಮಗುವಿನ ಜನನ ಪ್ರಮಾಣ ಹೆಚ್ಚಾಗಿದೆ ಎನ್ನುವುದು ತೀವ್ರ ಕಳವಳಕಾರಿ ಸಂಗತಿ. 18ಕ್ಕೂ ಮುನ್ನವೇ ತಾಯಿಯಾಗುವ ಈ ಹೆಣ್ಣುಮಕ್ಕಳು, ಮದುವೆಯಾಗದೆ 20 ವರ್ಷದವರೆಗೂ ಶಿಕ್ಷಣ ಮುಂದುವರಿಸಿದರೆ, ದೇಶಕ್ಕೆ ಪ್ರತಿ ವರ್ಷ 47,740 ಕೋಟಿ ರೂಪಾಯಿ ಉಳಿತಾಯವಾಗುತ್ತದೆ ಎನ್ನುವುದೂ ಮಹತ್ವದ ಸಂಗತಿ. ಸರಕಾರ ಈ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ದಕ್ಷಿಣ ಏಷ್ಯಾದಲ್ಲಿ ಪ್ರತಿ ವರ್ಷ ಸುಮಾರು ಆರು ಕೋಟಿ ಬಾಲ್ಯವಿವಾಹಗಳಾಗುತ್ತವೆ. ಅದರಲ್ಲಿ ಶೇಕಡ 40ರಷ್ಟು ಭಾರತದಲ್ಲೇ ನಡೆಯುತ್ತವೆ ಎನ್ನುತ್ತಿದೆ ಇನ್ನೊಂದು ವರದಿ. ಜಾಗತಿಕ ಮಟ್ಟದಲ್ಲಿ ಬಾಲ್ಯವಿವಾಹಗಳ ಸಂಖ್ಯೆ ಕಡಿಮೆ ಆಗಿದ್ದರೂ ದಕ್ಷಿಣ ಏಷ್ಯಾ, ಆಫ್ರಿಕಾದ ಸಹಾರಾ ವ್ಯಾಪ್ತಿಯ ಮತ್ತು ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಬಾಲ್ಯವಿವಾಹಗಳ ಸಂಖ್ಯೆ ಹೆಚ್ಚುತ್ತಿದೆ ಎನ್ನುವುದು ಆತಂಕ ಹೆಚ್ಚಿಸುವ ವಿಚಾರ. ಭಾರತದಲ್ಲಿ 1992–93ರಲ್ಲಿ 20–24 ವಯೋಮಾನದ ಮಹಿಳೆಯರ ಸಮೀಕ್ಷೆ ನಡೆಸಿದಾಗ ಅವರಲ್ಲಿ ಶೇಕಡ 54ರಷ್ಟು ಹೆಣ್ಣುಮಕ್ಕಳು 18 ವರ್ಷಕ್ಕಿಂತ ಮೊದಲೇ ಮದುವೆಯಾಗಿದ್ದ ಅಂಶ ಗೊತ್ತಾಯಿತು. 2007–08ರಲ್ಲಿ ಅದೇ ವಯೋಮಾನದವರ ಇನ್ನೊಂದು ಸಮೀಕ್ಷೆ ನಡೆಸಿದಾಗ, ಈ ಪ್ರಮಾಣ ಶೇಕಡ 43ಕ್ಕೆ ಕುಸಿದಿದ್ದೂ ಗಮನಕ್ಕೆ ಬಂತು. 'ಆದರೆ ಈ ಕುಸಿತ ಪ್ರಮಾಣ ಏನೇನೂ ಸಾಲದು' ಎಂದು ವಿಶ್ವಸಂಸ್ಥೆ ಅಭಿಪ್ರಾಯ ಪಟ್ಟಿದೆ.

ಈ ಹಿನ್ನೆಲೆಯಲ್ಲೇ ವಿಶ್ವಸಂಸ್ಥೆಯು ಬಾಲ್ಯ ಮತ್ತು ಬಲವಂತದ ವಿವಾಹದ ವಿರುದ್ಧ ಹೊಸ ನಿರ್ಣಯವೊಂದನ್ನು ಅಂಗೀಕರಿಸಲು ಹೊರಟಿದ್ದು 107 ದೇಶಗಳು ಅದಕ್ಕೆ ಬೆಂಬಲ ವ್ಯಕ್ತಪಡಿಸಿವೆ. ಬಾಲ್ಯವಿವಾಹ ಅತ್ಯಧಿಕ ಸಂಖ್ಯೆಯಲ್ಲಿ ನಡೆಯುವ ಇಥಿಯೋಪಿಯಾ, ದಕ್ಷಿಣ ಸೂಡಾನ್, ಯೆಮನ್ ಮುಂತಾದ ದೇಶಗಳು ಈ ನಿರ್ಣಯಕ್ಕೆ ಸಹಿ ಹಾಕಿದ್ದರೂ, ಭಾರತ ಮಾತ್ರ ಈ ನಿರ್ಣಯದ ಸಹಪ್ರಾಯೋಜಕತ್ವಕ್ಕೆ ಸಹಿ ಹಾಕಿಲ್ಲ! ಬಾಲ್ಯವಿವಾಹ ನಿಷೇಧಕ್ಕೆ ಭಾರತ ತನ್ನದೇ ಆದ ಕಾರ್ಯಯೋಜನೆಯನ್ನು ಜಾರಿಗೊಳಿಸಿದೆ. ಲೈಂಗಿಕ ದೌರ್ಜನ್ಯ ವಿರೋಧಿ ಕಾಯಿದೆಯೂ ಇಲ್ಲಿ ಬಲವಾಗಿದೆ. ಹಾಗಿದ್ದೂ ಭಾರತ ಸಹಿ ಹಾಕಲು ಹಿಂಜರಿಯುವುದು ಸರಿಯಲ್ಲ.

■ **ಬಿ.ಎಂ.ಹನೀಫ್**



ಸಾಂಗಳೇಕರ್